ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂ: **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಿರಿಜವ್ವಾ ವಾಲಿಕಾರ | ಪ್ರಾಸಾ: 6 |
| ಗಂಡನ ಹೆಸರು | : | ಶಿವಾನಂದ ವಾಲಿಕಾರ | ಚಾಸಾ: 19 |
| ಪ್ರಾಯ | : | 41 ವರ್ಷ | ದಿನಾಂಕ 17.04.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಶಾಂತಿನಗರ, ಸವದತ್ತಿ. | |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-18 ಶಿವಾನಂದ ವಾಲಿಕಾರ ನನ್ನ ಗಂಡ. ನನಗೆ ಚಾಸಾ-7 ಸಿದ್ರಾಯಿ ಕೌಜಲಗಿ ಮತ್ತು ಚಾಸಾ-8 ಮಹಾದೇವಿ ಕೌಜಲಗಿ ಇವರು ಗೊತ್ತು.

2. ನನಗೆ ಎರಡು ಸ್ವಂತ ಮನೆಗಳು ಇವೆ. ಅವುಗಳಲ್ಲಿ ಒಂದು ಮನೆ ಶಾಂತಿ ನಗರದಲ್ಲಿ ಮತ್ತು ಇನ್ನೊಂದು ಮನೆ ಅಯ್ಯಪ್ಪಾಸ್ವಾಮಿ

ನಗರದಲ್ಲಿರುತ್ತದೆ. ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ಮನೆ ತಗಡು ಛಾವಣಿಯ ಮನೆಯಾಗಿರುತ್ತದೆ.

**3.** ಚಾಸಾ-**8** ಮಹಾದೇವಿ ಕೌಜಲಗಿ ಶಬಾನಾ ಗೊರವನಕೊಳ್ಳ ಎಂಬುವವಳನ್ನು ಕರೆದುಕೊಂಡು ಬಂದು ನನಗೆ ಪರಿಚಯ ಮಾಡಿಸಿ, ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ನನ್ನ ಈ ಮೇಲೆ ಹೇಳಿದ ಮನೆಯನ್ನು ಸದರಿ ಶಬಾನಾಳಿಗೆ ಈಗ ಎರಡುವರೆ ವರ್ಷಗಳ ಹಿಂದೆ ಬಾಡಿಗೆಗೆ ನೀಡಿದ್ದೆ. ಸದರಿ ಮನೆ ಬಾಡಿಗೆ ತಿಂಗಳಿಗೆ ರೂ.**800/-** ಇತ್ತು. ಸದರಿ ಮನೆಯಲ್ಲಿ ಶಬಾನಾ ಮತ್ತು ಆಕೆಯ ಮಗಳು ಆಲಿಮಾ ಇರುತ್ತಿದ್ದರು.

**4.** ತನ್ನ ಮತ್ತು ತನ್ನ ಗಂಡನ ಮಧ್ಯೆ ಜಗಳವಾಗಿದ್ದು, ತನ್ನ ಗಂಡ ತನ್ನ ಜೊತೆ ಇರುವುದಿಲ್ಲ ಮತ್ತು ಈ ಕಾರಣದಿಂದ ತಾನು ಮತ್ತು ತನ್ನ ಮಗಳು ಮನೆಯಲ್ಲಿರುತ್ತೇವೆ ಎಂದು ಶಬಾನಾ ನನ್ನಲ್ಲಿ ಹೇಳಿದಳು. ಶಬಾನಾಳ ಗಂಡ ಮುನವಳ್ಳಿಯಲ್ಲಿ ಇರುವುದಾಗಿ ಶಬಾನಾ ನನ್ನಲ್ಲಿ ಹೇಳಿರುತ್ತಾಳೆ.

**5.** ಶಬಾನಾಳಿಗೆ ಮನೆ ಬಾಡಿಗೆಗೆ ಕೊಟ್ಟ **15** ದಿನಗಳ ನಂತರ ಬೆಳಿಗ್ಗೆ ಸುಮಾರು **11.00** ಗಂಟೆ ಸುಮಾರಿಗೆ ಚಾಸಾ-**8** ಮಹಾದೇವಿ ನನ್ನ ಗಂಡ ಚಾಸಾ-**18** ರವರಿಗೆ ಪೋನ್ ಮಾಡಿ, ಶಬಾನಾಳನ್ನು ಆಕೆಯ ಗಂಡ ಬಂದು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾನೆ, ಬನ್ನಿ ಎಂದು ಹೇಳಿರುತ್ತಾಳೆ. ಅದರಂತೆ ನಾನು ಮತ್ತು ನನ್ನ ಗಂಡ ಕೂಡಿಕೊಂಡು ಸದರಿ ಮನೆಗೆ ಹೋಗಿರುತ್ತೇವೆ.

**6.** ಅಲ್ಲಿ ಮನೆಗೆ ಹೋಗಿ ನೋಡಿದಾಗ ನೆಲದಲ್ಲಿ ರಕ್ತ ಬಿದ್ದಿತ್ತು. ಶಬಾನಾಳ ಕೊರಳು, ಹೊಟ್ಟೆ ಮತ್ತು ಕೈಗೆ ಚುಚ್ಚಿದ ಗಾಯಗಳು ಇದ್ದವು. ಶಬಾನಾಳ ತಲೆ ಮನೆಯ ಬಾಗಿಲ ಕಡೆಗೆ ಇತ್ತು. ಶಬಾನಾಳ ಗಂಡ ಆಕೆಯ ಮೇಲೆ ಸಂಶಯ ಮಾಡಿ ಆಕೆಯನ್ನು ಕೊಲೆ ಮಾಡಿರುವುದಾಗಿ ತಿಳಿಯಿತು. ಆ ದಿನ ಬೆಳಿಗ್ಗೆ **10.30** ಗಂಟೆಗೆ ಶಬಾನಾಳ ಕೊಲೆಯಾಗಿರುವುದಾಗಿ ಚಾಸಾ-**8** ಮಹಾದೇವಿ ನನಗೆ ಹೇಳಿದಳು.

**7.** ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ಈ ಮೇಲೆ ಹೇಳಿರುವ ಮನೆ **30** ಅಡಿ ಉದ್ದ ಮತ್ತು **9** ಅಡಿ ಅಗಲ ಇದೆ. ಸದರಿ ಮನೆ ಒಂದು ಕೋಣೆಯ ಮನೆಯಾಗಿದ್ದು, ಅದರ ಮಧ್ಯೆ ಅರ್ಧ ಗೋಡೆಯಷ್ಟು ಎತ್ತರಕ್ಕೆ ವಿಭಾಗ ಮಾಡಿ ಗೋಡೆ ಮಾಡಿದ್ದು, ಅಡುಗೆ ಮನೆಗೆ ಮರೆಯಾಗುವಂತೆ ಮಾಡಲಾಗಿತ್ತು.

**8.** ಸದರಿ ಮನೆ ಇರುವ ಜಾಗೆ ನನಗೆ ಅಕ್ರಮ-ಸಕ್ರಮದಿಂದ ಬಂದಿರುತ್ತದೆ. ಶಬಾನಾಳ ಗಂಡನ ಹೆಸರು ಮೆಹಬೂಬಸಾಬ್. ಪೋಲಿಸರು ನನ್ನನ್ನು ಈ ಕೇಸಗೆ ಸಂಬಂಧಪಟ್ಟಂತೆ ಶಬಾನಾಳ ಕೊಲೆಯಾದ ದಿನ ಕರೆಸಿದ್ದರು ಮತ್ತು ಮರುದಿನ ಸಹ ಕರೆಸಿದ್ದರು. ನಾನು ಪೋಲಿಸರ ಮುಂದೆ ಈ ಕೇಸಗೆ ಸಂಬಂಧಪಟ್ಟಂತೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಎಸ್ ಕೆ ಪಿ (ಡಿ ಎಲ್ ಎಸ್ ಎ) ವಕೀಲರಿಂದಃ</u>

**9.** ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ಶಬಾನಾ ಬಾಡಿಗೆಗೆ ವಾಸ ಮಾಡುತ್ತಿದ್ದ ನನ್ನ ಮನೆಯು ಶಾಂತಿ ನಗರದಲ್ಲಿರುವ ನನ್ನ ಮನೆಯಿಂದ ಸುಮಾರು **6-7** ಕಿ.ಮೀ ದೂರ ಇದೆ. ಶಬಾನಾಳು ನನಗೆ ಮೊದಲಿನಿಂದ ಗೊತ್ತಿಲ್ಲ. ಆಕೆಯ ಪರಿಚಯ ನನಗೆ ಇದ್ದಿಲ್ಲ. ಚಾಸಾ-**8** ಮಹಾದೇವಿ ಇವಳು ಶಬಾನಾಳನ್ನು ನನ್ನ ಶಾಂತಿ ನಗರದ ಮನೆಗೆ ಕರೆದುಕೊಂಡು ಬಂದ ನಂತರ ನನಗೆ ಶಬಾನಾಳ ಪರಿಚಯವಾಗಿರುತ್ತದೆ. ಅಯ್ಯಪ್ಪಾಸ್ವಾಮಿ ನಗರದಲ್ಲಿರುವ ನಮ್ಮ ಮನೆ ನನ್ನ ಹೆಸರಿನಲ್ಲಿರುತ್ತದೆ. ಸದರಿ ಮನೆಗೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ನಾನು ಪೋಲಿಸರಿಗೆ ನೀಡಿಲ್ಲ. ಸದರಿ ಮನೆಗೆ ಎರಡು ಬಾಗಿಲುಗಳು ಇವೆ. ಸದರಿ ಮನೆಯ ಮುಂದಿನ ಬಾಗಿಲು ಮತ್ತು ಹಿಂದಿನ ಬಾಗಿಲು ಯಾವ ದಿಕ್ಕುಗಳಿಗೆ ಇವೆ ಎಂದು ನನಗೆ ಗೊತ್ತಿಲ್ಲ.

**10.** ಚಾಸಾ-**8** ಮಹಾದೇವಿ ಮತ್ತು ಆಕೆಯ ಗಂಡ ಸಿದ್ರಾಯಿ ನನಗೆ ಸುಮಾರು **7 – 8** ವರ್ಷಗಳಿಂದ ಗೊತ್ತು. ನನ್ನಲ್ಲಿ ಮತ್ತು ನನ್ನ ಗಂಡನಲ್ಲಿ ಇಬ್ಬರಲ್ಲಿ ಮೊಬೈಲ್ ಪೋನಗಳು ಇವೆ. ಶಬಾನಾ ಮಹಾದೇವಿ ಜೊತೆ ನನ್ನ ಮನೆಗೆ ಎಷ್ಟು ಗಂಟೆಗೆ ಬಂದಿದ್ದು ಎಂದು ಈಗ ನನಗೆ ಗೊತ್ತಿಲ್ಲ. ಶಬಾನಾಳಿಗೆ ಮನೆಯನ್ನು ಬಾಡಿಗೆಗೆ ನೀಡಿರುವ ಬಗ್ಗೆ ಕರಾರು ಪತ್ರ ಮತ್ತು ಯಾವುದೇ ದಾಖಲೆಯನ್ನು ಮಾಡಿಕೊಂಡಿಲ್ಲ. ತಾನು ತನ್ನ ಗಂಡನ ವಿರುದ್ದ ವಿಚ್ಛೇದನ ಪಡೆದಿರುತ್ತೇನೆಂದು ಶಬಾನಾ ನನ್ನಲ್ಲಿ ಹೇಳಿಲ್ಲ. ತಾನು ಚಹಾ

ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ಶಬಾನಾ ನನ್ನಲ್ಲಿ ಹೇಳಿರುತ್ತಾಳೆ. ಶಬಾನಾ ಐಸ್ ಕ್ರೀಮ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದಳೆಂದು ನನಗೆ ಗೊತ್ತಿಲ್ಲ. ಶಬಾನಾಳ ತವರು ಮನೆಯ ಬಗ್ಗೆ ನಾನು ಆಕೆಯನ್ನು ಕೇಳಿಲ್ಲ.

**11.** ನನ್ನ ಗಂಡ ಗೌಂಡಿ ಕೆಲಸಕ್ಕೆ ಹೋಗುತ್ತಾರೆ. ಅವರು ಮನೆಯಿಂದ ಮುಂಜಾನೆ **8 – 9** ಗಂಟೆಗೆ ಮನೆಯಿಂದ ಹೋಗಿ ಸಂಜೆ **06.00** ಗಂಟೆಗೆ ಮನೆಗೆ ವಾಪಸ್ಸಾಗುತ್ತಾರೆ. ಚಾಸಾ-**8** ಮಹಾದೇವಿ ನನ್ನ ಗಂಡನಿಗೆ ಪೋನ್ ಮಾಡಿ ಶಬಾನಾಳ ಕೊಲೆಯಾದ ವಿಷಯ ತಿಳಿಸಿಲ್ಲ ಎಂದರೆ ಸರಿಯಲ್ಲ. ನಮಗೆ ಸ್ವತಃ ಶಬಾನಾಳ ಕೊಲೆಯ ವಿಷಯ ತಿಳಿದು ನಾವು ಮರುದಿನ ಆಕೆ ವಾಸ ಮಾಡುತ್ತಿದ್ದ ಮನೆಗೆ ಹೋಗಿದ್ದೆವು ಎಂದರೆ ಸರಿಯಲ್ಲ.

**12.** ಶಬಾನಾಳ ಕೊಲೆ ಬೆಳಿಗ್ಗೆ **10.30** ಗಂಟೆಗೆ ಆಗಿದ್ದು ಅಲ್ಲ ಎಂದರೆ ಸರಿಯಲ್ಲ. ಶಬಾನಾಳ ಕೊಲೆಯನ್ನು ರಾತ್ರಿ ಯಾರೋ ಮಾಡಿ ಹೋಗಿದ್ದು ಎಂದು ಚಾಸಾ-**7** ಸಿದ್ರಾಯಿ ಮತ್ತು ಚಾಸಾ-**8** ಮಹಾದೇವಿ ಮಾತನಾಡಿಕೊಳ್ಳುತಿದ್ದರು ಮತ್ತು ಸದರಿ ವಿಷಯ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಶಬಾನಾಳ ಮನೆಗೆ ಬೇರೆ ಗಂಡಸರು ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಾದರೆ ನನ್ನ ಮನೆ ಹೆಸರು ಕೆಡುತ್ತದೆ ಎನ್ನುವ ಕಾರಣಕ್ಕೆ ಪೋಲಿಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಶಬಾನಾಳ ಜೊತೆ ಜಗಳ ಮಾಡುತ್ತಿದ್ದ ಎಂದು ನಾನು ಪೋಲಿಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಶಬಾನಾಳ

ಗಂಡನಿಗೆ ಶಬಾನಾಳ ಜೊತೆ ವಿಚ್ಛೇದನ ಆಗಿ ಆತ ಮುನವಳ್ಳಿಯಲ್ಲಿ ವಾಸ ಮಾಡುತ್ತಿದ್ದ ವಿಷಯ ಗೊತ್ತು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.